ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ಜೀರೋ ಅವರ್ ಇವೊತ್ತು ಬರುವುದು ಡೌಟ್ ಇದೆ.

ಅಧ್ಯಕ್ಷರು : ಜೀರೋ ಅವರ್ ಬರುತ್ತದೆ.

ಅ. ವಿಷಯ: ಕರ್ನಾಟಕದ ಕ್ರೀಡಾ ಪಟುಗಳು ಪ್ರಶಸ್ತಿಗಳಿಸಿರುವ ಬಗ್ಗೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ : ಜೀರೋ ಅವರ್ ಏಕೆ ಬರುವುದಿಲ್ಲವೆಂದರೆ, ಸದನದಲ್ಲಿ ಈಗ ಮುಖ್ಯಮಂತ್ರಿಗಳಿರುವುದರಿಂದ ಅವರ ಗಮನ ಸೆಳೆಯುವುದಷ್ಟೆ. ಇಲ್ಲಿ ಎರಡು ವಿಚಾರಗಳಿವೆ. ಕರ್ನಾಟಕದಿಂದ ಮೊದಲನೇ ಬಾರಿಗೆ ಭಾರತದ ಕ್ರೀಡಾಪಟುಗಳು ಇಷ್ಟೊಂದು ಪ್ರಶಸ್ತಿಗಳನ್ನು ಗಳಿಸಿರುವುದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡುವಂಥ ವಿಚಾರವಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕದ ಹೆಲೆನ್ ಮೇರಿಯವರು, ಸುಧೀರ್ ಕುಮಾರ್‌ರವರು ವೇಯಿಟ್ ಲಿಫ್ಟಿಂಗ್‌ನಲ್ಲಿ, ಅಪಣ್ಣಾ ಪೊಪೆಟ್‌ನವರು ಬ್ಯಾಡಿ ಮಿಂಟನ್ ನಲ್ಲಿ, ಚೇತನ್ ಬಬೂರ್ ರವರು ಟೇಬಲ್ ಟೆನಿಸ್‌ನಲ್ಲಿ ಮಾಡಿರುವ ಸಾಧನೆ .....

3. ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ) : ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ಪ್ರೌಢಶಿಕ್ಷಣಾ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಸಭೆ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

4. ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತವೆ.

ಅ) ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 103ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 7ನೇ ಆಗಸ್ಟ್ 2002ರಂದು ಹಂಪಿ ವಿಶ್ವ, ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2002ನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆಯೆಂದು ತಿಳಿಸಿ, ಸದರಿ ವಿಧೇಯಕಕ್ಕೆ ವಿಧಾನಸಭೆಯ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಆ) ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 103ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 7ನೇ ಆಗಸ್ಟ್ 2002ರಂದು ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ನಿರಶನ ವಿಧೇಯಕ 2002ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆಯೆಂದು ತಿಳಿಸಿ, ಸದರಿ ವಿಧೇಯಕಕ್ಕೆ ವಿಧಾನಸಭೆಯ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

ಅನುಬಂಧ -1

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ

1984ರ ಕರ್ನಾಟಕ ಲೋಕಾಯುಕ್ತ, ಆಧಿನಿಯಮ 4:1983ರ ಖಂಡ 12(7)ರ ಪ್ರಕರಣದ ಮೇರೆಗೆ: